**ಸದನದಲ್ಲಿ ಉತ್ತರಿಸುವ**
**ಪ್ರಶ್ನೆಗಳ ಪಟ್ಟಿ**
**ಒಟ್ಟು ಪ್ರಶ್ನೆಗಳು – ೧೫**

**ಪಟ್ಟಿ–೧೨**

# ಕರ್ನಾಟಕ ವಿಧಾನ ಪರಿಷತ್ತು

**ನೂರ ಐವತ್ತೆಂಟನೆಯ ಅಧಿವೇಶನ**
**(ಮುಂದುವರೆದ ಉಪವೇಶನಗಳು)**
**ಬುಧವಾರ, ದಿನಾಂಕ: ೧೮ನೇ ಮಾರ್ಚ್, ೨೦೨೬**

---

**ಸಮೂಹ – III**

೧. ಸಾರಿಗೆ ಮತ್ತು ಮುಜರಾಯಿ ಸಚಿವರು

೨. ಲೋಕೋಪಯೋಗಿ ಸಚಿವರು

೩. ಕಂದಾಯ ಸಚಿವರು

೪. ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು

೫. ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು

೬. ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

---

## ಮೀನುಗಾರಿಕಾ ಬಂದರುಗಳಲ್ಲಿ ಅಳಿವೆಬಾಗಿಲು ಪ್ರದೇಶಗಳಲ್ಲಿ ಹೂಳು ಮತ್ತು ಮರಳಿನ ದಿಬ್ಬ ತೆರವುಗೊಳಿಸುವ ಕುರಿತು

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೬೬ (೧೬೭೨) ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರಾವಳಿ ಜಿಲ್ಲೆಗಳ ವಿವಿಧ ಮೀನುಗಾರಿಕಾ ಬಂದರುಗಳಲ್ಲಿ ಮತ್ತು ಪ್ರದೇಶಗಳಲ್ಲಿ ಅಳಿವೆಬಾಗಿಲು ಕಳೆದ ೩೦ ವರ್ಷಗಳಲ್ಲಿ ಹೂಳು ತುಂಬುವ ಸಮಸ್ಯೆಯಿಂದಾಗಿ ಎಷ್ಟು ಅಪಘಾತಗಳು ಸಂಭವಿಸಿವೆ ; ಎಷ್ಟು

ಮೀನುಗಾರರು ಮೃತಪಟ್ಟಿದ್ದಾರೆ ; ಎಷ್ಟು ಬೋಟ್‌ಗಳಿಗೆ ಹಾನಿಯಾಗಿದೆ ; ಸಂಭವಿಸಿದ ಒಟ್ಟು ನಷ್ಟವೆಷ್ಟು ;

(ಆ) ರಾಜ್ಯದ ಅಳಿವೆಬಾಗಿಲು ಹಾಗೂ ಮೀನುಗಾರಿಕಾ ಬಂದರುಗಳಲ್ಲಿ ಹಿಂದಿನ ವರ್ಷಗಳಲ್ಲಿ ಎಷ್ಟು ಬಾರಿ ಡ್ರೆಜ್ಜಿಂಗ್ (ಹೂಳು ತೆಗೆಯುವ) ಕಾರ್ಯ ಕೈಗೊಳ್ಳಲಾಗಿದೆ ; ಈ ಕಾರ್ಯಕ್ಕಾಗಿ ಎಷ್ಟು ಅನುದಾನಕ್ಕೆ ಬೇಡಿಕೆ ಸಲ್ಲಿಸಲಾಗಿತ್ತು ; ಈ ಪ್ರಕ್ರಿಯೆಯಲ್ಲಿ ಅನುಸರಿಸಿದ ಪ್ರಮಾಣೀಕೃತ ಕಾರ್ಯವಿಧಾನ ಯಾವುದು ; (ವರ್ಷವಾರು ವೆಚ್ಚದ ವಿವರ ನೀಡುವುದು)

(ಇ) ಅಳಿವೆಬಾಗಿಲಿನಲ್ಲಿ ಸಂಪೂರ್ಣ ಪ್ರಮಾಣದ ಡ್ರೆಜ್ಜಿಂಗ್ ಮಾಡಲು ಹಾಗೂ ಮರಳು ದಿಬ್ಬ ತೆರವು ಮಾಡಲು ಎಷ್ಟು ಅನುದಾನದ ಅಗತ್ಯವಿದೆ ; ರಾಜ್ಯದಲ್ಲಿ ಇಲಾಖೆಯ ಬಳಿ ಸ್ವಂತ ಡ್ರೆಜ್ಜಿಂಗ್ ಯಂತ್ರವಿಲ್ಲದಿರಲು ಕಾರಣವೇನು ; ಕೇರಳ ರಾಜ್ಯದಂತೆ ಸರ್ಕಾರವೇ ಡ್ರೆಜ್ಜಿಂಗ್ ಯಂತ್ರವನ್ನು ಖರೀದಿಸಿ ನಿರ್ವಹಿಸುವ ಮಾದರಿಯನ್ನು ರಾಜ್ಯದಲ್ಲಿ ಅನುಸರಿಸುವ ಬಗ್ಗೆ ಸರಕಾರದ ನಿರ್ಧಾರಗಳೇನು ;

(ಈ) ಗ್ರಾಬ್ ಡ್ರೆಜ್ಜರ್ ಬದಲು "ಕಟ್ಟಿಂಗ್‌ಡ್ರೆಜ್ಜರ್" ಖರೀದಿಸುವ ಬಗ್ಗೆ ಆಯಾಯ ಮೀನುಗಾರರ ಸಂಘಗಳು ನೀಡಿದ ಮನವಿಗಳ ಕುರಿತು ಇಲಾಖೆಯ ಕ್ರಮಗಳೇನು ; ಕೆಲವು ಬಂದರುಗಳಲ್ಲಿ ಡ್ರೆಜ್ಜಿಂಗ್ ಕಾರ್ಯ ನಿಜವಾಗಿ ನಡೆಯದೆ ಕೇವಲ ಬಿಲ್ ಸಲ್ಲಿಸಿ ಅನುದಾನ ಬಳಸಲಾಗುತ್ತಿದೆ ಎಂಬ ಆರೋಪಗಳಿದ್ದು ಈ ಕುರಿತು ತನಿಖಾ ವರದಿಗಳೇನು ;

(ಉ) ಮೀನುಗಾರರ ಜೀವರಕ್ಷಣೆ ಹಾಗೂ ಬಂದರುಗಳ ಸುಗಮ ಸಂಚಾರಕ್ಕಾಗಿ ನಿಯಮಿತ ನಿರ್ವಹಣಾ ಡ್ರೆಜ್ಜಿಂಗ್‌ನ್ನು ವರ್ಷಕ್ಕೊಮ್ಮೆ ಅಥವಾ ಕನಿಷ್ಠ ಎರಡು ವರ್ಷಕ್ಕೊಮ್ಮೆ ಕಡ್ಡಾಯವಾಗಿ ಕೈಗೊಳ್ಳುವ ಬಗ್ಗೆ ಸರ್ಕಾರದ ನಿರ್ಧಾರಗಳೇನು ?

# ಬಳ್ಳಾರಿ–ವಿಜಯನಗರ ಜಿಲ್ಲೆಗಳಲ್ಲಿನ ಹಳೆಯ ಬಸ್‍ಗಳನ್ನು ಬದಲಿಸುವ ಬಗ್ಗೆ

**ಶ್ರೀ ವೈ.ಎಂ. ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ ) –**

೧೬೭ (೧೬೦೨) ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳಲ್ಲಿ ಇರುವ ಹವಾ ನಿಯಂತ್ರಿತ, ನಾನ್ ಎಸಿ ಹಾಗೂ ಸಾರಿಗೆ ಬಸ್‍ಗಳ ಸಂಖ್ಯೆ ಎಷ್ಟು ;

(ಆ) ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳಲ್ಲಿ ಇರುವ ಹವಾ ನಿಯಂತ್ರಿತ ನಾನ್ ಎಸಿ ಹಾಗೂ ಸಾರಿಗೆ ಬಸ್‍ಗಳಲ್ಲಿ ೯.೦೦ ಲಕ್ಷಗಳು ಕ್ರಮಿಸಿದ ಬಸ್‍ಗಳ ಸಂಖ್ಯೆ ಎಷ್ಟು ;

(ಇ) ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳಲ್ಲಿ ಲಭ್ಯವಿರುವ ಹವಾ ನಿಯಂತ್ರಿತ, ನಾನ್ ಎಸಿ ಹಾಗೂ ಸಾರಿಗೆ ಬಸ್‍ಗಳ ಪೈಕಿ ಗುಜರಿ (Scrap) ಇರುವ ಬಸ್‍ಗಳ ಸಂಖ್ಯೆ ಎಷ್ಟು ;

(ಈ) ೨೦೨೩–೨೪ನೇ ಸಾಲಿನಿಂದ ಕಲ್ಯಾಣ ಕರ್ನಾಟಕ ಭಾಗದಲ್ಲಿ ನೂತನ ವಾಹನಗಳನ್ನು ವಿತರಿಸಲಾಗಿದೆ ; (ಡಿಪೋಗಳವಾರು ಮತ್ತು ಬಸ್‍ಗಳ ಮಾದರಿವಾರು ಮಾಹಿತಿ ನೀಡುವುದು)

(ಉ) ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳಿಗೆ ಹವಾ ನಿಯಂತ್ರಿತ, ನಾನ್ ಎಸಿ ಹಾಗೂ ಸಾರಿಗೆ ಬಸ್‍ಗಳು ಗುಜರಿ (Scrap) ಬಸ್‍ಗಳ ಬದಲಾಗಿ ನೂತನ ವಾಹನ ನೀಡಲು ಸರ್ಕಾರದಿಂದ ಯಾವ ಕ್ರಮ ಜರುಗಿಸಲಾಗುವುದು ?

# ಬೆಂಗಳೂರು ಜಿಲ್ಲಾ ಜಿಲ್ಲಾಧಿಕಾರಿ ಮತ್ತು ಎಸಿ ಕಚೇರಿಯಲ್ಲಿ ಭೂ ಪರಿವರ್ತನೆ ಬಗ್ಗೆ

**ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ ) –**

೧೬೮ (೧೫೭೫) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರ ಜಿಲ್ಲೆಯ ಜಿಲ್ಲಾಧಿಕಾರಿ ಮತ್ತು ಎಸಿ ಕಚೇರಿಗಳಲ್ಲಿ ಎಷ್ಟು ಭೂ ಪರಿವರ್ತನೆ ಮತ್ತು ಕಂದಾಯ ಸಂಬಂಧಿತ ಅರ್ಜಿಗಳು ಬಾಕಿ ಇವೆ ; (ಮಾಹಿತಿ ನೀಡುವುದು)

(ಆ) ಜಾತಿ, ಆದಾಯ ಮತ್ತು ನಿವಾಸ ಪ್ರಮಾಣಪತ್ರ ಅರ್ಜಿಗಳನ್ನು ವಿಲೇವಾರಿ ಮಾಡಲು ತೆಗೆದುಕೊಳ್ಳುವ ಸರಾಸರಿ ಸಮಯ ಎಷ್ಟು ;

(ಇ) ಖಾತಾ ವರ್ಗಾವಣೆ ಮತ್ತು ಭೂ ದಾಖಲೆ ನವೀಕರಣಗಳಲ್ಲಿ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರಿಪಡಿಸಲು ಯಾವ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ; (ಮಾಹಿತಿ ನೀಡುವುದು)

(ಈ) ಡಿಸಿ ಮತ್ತು ಎಸಿ ಕಛೇರಿಗಳಲ್ಲಿ ಭ್ರಷ್ಟಾಚಾರ ಮತ್ತು ಮಧ್ಯವರ್ತಿಗಳ ಹಸ್ತಕ್ಷೇಪವನ್ನು ತಡೆಯಲು ಸರ್ಕಾರದಿಂದ ಯಾವ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ ;

(ಉ) ಸಾರ್ವಜನಿಕ ಕುಂದುಕೊರತೆಗಳನ್ನು ಕಡಿಮೆ ಮಾಡಲು ಮತ್ತು ಕಂದಾಯ ಕಛೇರಿಗಳಲ್ಲಿ ಸೇವಾ ವಿತರಣೆಯನ್ನು ಸುಧಾರಿಸಲು ಸರ್ಕಾರದಿಂದ ಯಾವ ಕ್ರಮಗಳನ್ನು ಜಾರಿಗೆ ತರಲಾಗುತ್ತಿದೆ ;

(ಊ) ಬೆಂಗಳೂರು ನಗರದ ಜಿಲ್ಲಾಧಿಕಾರಿ ಮತ್ತು ಎಸಿ ಕಚೇರಿಗಳಲ್ಲಿ ಸಿಬ್ಬಂದಿ ಕೊರತೆ ಇದೆಯೇ ; ಖಾಲಿ ಹುದ್ದೆಗಳ ವಿವರಗಳನ್ನು ಒದಗಿಸುವುದು ;

(ಋ) ಬೆಂಗಳೂರಿನಲ್ಲಿ ಹೆಚ್ಚುತ್ತಿರುವ ಕೆಲಸದ ಹೊರೆಯಿಂದಾಗಿ ಎಸಿ ಕಚೇರಿಗಳಲ್ಲಿ ಮೂಲಸೌಕರ್ಯ ಮತ್ತು ಮಾನವಶಕ್ತಿಯನ್ನು ಬಲಪಡಿಸುವ ಯಾವುದೇ ಪ್ರಸ್ತಾವ ಸರ್ಕಾರದ ಮುಂದಿದೆಯೇ ?

## ಗೆಜೆಟ್ ಆಧಾರದ ಮೇಲೆ RTCಯಲ್ಲಿ ವಕ್ಫ್ ಜಮೀನು ಎಂದು ನಮೂದಿಸಿರುವ ಕುರಿತು

**ಶ್ರೀ ಪಿ.ಹೆಚ್. ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ ) –**

೧೬೯ (೧೫೫೫) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸರ್ಕಾರದ ಭೂಮಿಯನ್ನು ಅಂದರೆ ಸಾರ್ವಜನಿಕ ಸ್ಮಶಾನ, ಗೋಮಾಳ, ಕಂದಾಯ ಇಲಾಖೆಯ ಇತರೆ ಜಮೀನನ್ನು ಗ್ರಾಂಟ್ ಇಲ್ಲದೆ ಕೇವಲ ಗೆಜೆಟ್ ಆಧಾರದ ಮೇಲೆ ಎಷ್ಟು ಎಕರೆ ಭೂಮಿಯನ್ನು ಆರ್.ಟಿ.ಸಿ.ಯಲ್ಲಿ ದಾಖಲೆ ಮಾಡಲಾಗಿದೆ ; ಜಿಲ್ಲಾವಾರು, ತಾಲ್ಲೂಕುವಾರು ಮಾಹಿತಿ ನೀಡುವುದು ;

(ಆ) ಯಾವುದೇ ಖರೀದಿ ಪತ್ರ, ದಾನ ಪತ್ರ, ನೋಂದಣಿ ಪತ್ರ, ಮಂಜೂರಾತಿ ಪತ್ರ ಇಲ್ಲದೆ ಕೇವಲ ಗೆಜೆಟ್ ಆಧಾರದ ಮೇಲೆ ಆರ್.ಟಿ.ಸಿ.ಯಲ್ಲಿ ವಕ್ಫ್ ಎಂದು ನಮೂದಿಸಿದ ಆಸ್ತಿ ವಿವರವನ್ನು ಜಿಲ್ಲಾವಾರು, ತಾಲ್ಲೂಕುವಾರು ಮಾಹಿತಿ ನೀಡುವುದು ;

(ಇ) ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್‌ಗಳ ಸ್ಪಷ್ಟ ನಿರ್ದೇಶನ ಇದ್ದರೂ ಕೇವಲ ಗೆಜೆಟ್ ಆಧಾರದ ಮೇಲೆ ಆರ್.ಟಿ.ಸಿ.ಯಲ್ಲಿ ವಕ್ಫ್ ಎಂದು ನಮೂದಿಸಿದ ಅಧಿಕಾರಿಗಳ ಮೇಲೆ ಯಾವ ಕ್ರಮ ಜರುಗಿಸಲಾಗಿದೆ ;

(ಈ) ಅಕ್ರಮವಾಗಿ ಪರಭಾರೆ ಮಾಡಿದ ಎಷ್ಟು ಜಮೀನನ್ನು ವಾಪಸ್ ಪಡೆಯಲಾಗಿದೆ ; ಜಿಲ್ಲಾವಾರು, ತಾಲ್ಲೂಕುವಾರು ಮಾಹಿತಿ ನೀಡುವುದು ?

## ಸಾರಿಗೆ ನೌಕರರಿಗೆ ವೇತನ ಪರಿಷ್ಕರಣೆಯ ಹಣ ಬಾಕಿ ಉಳಿಸಿಕೊಂಡಿರುವ ಬಗ್ಗೆ

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶನ ಹೊಂದಿದವರು) –**

**ಶ್ರೀ ಗೋವಿಂದ ರಾಜು (ವಿಧಾನಸಭೆಯಿಂದ ಚುನಾಯಿತರಾದವರು) –**

೧೭೦ (೧೭೦೧+೧೬೦೧) ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಹಿಳೆಯರಿಗೆ ಉಚಿತ ಸಾರಿಗೆ ಸೌಲಭ್ಯ ಎಂದಿನಿಂದ ಆರಂಭವಾಯಿತು ;

(ಆ) ಸದರಿ ದಿನಾಂಕದಿಂದ ಇಲ್ಲಿಯವರೆಗೆ ತಿಂಗಳುವಾರು ಎಷ್ಟು ಹಣವನ್ನು ಸಾರಿಗೆ ಇಲಾಖೆಗೆ ಸರ್ಕಾರದಿಂದ ಸಂದಾಯವಾಗಿದೆ ; ಸಂದಾಯವಾಗಿದ್ದಲ್ಲಿ, ತಿಂಗಳುವಾರು ಬೇಡಿಕೆ ಮತ್ತು ಸಂದಾಯದ ವಿವರ ಒದಗಿಸುವುದು ;

(ಇ) ಪ್ರಸ್ತುತ ಸಾರಿಗೆ ಸಂಸ್ಥೆಯ ಆರ್ಥಿಕ ಪರಿಸ್ಥಿತಿ ಹೇಗಿದೆ ಹಾಗೂ ಸಾರಿಗೆ ಸಂಸ್ಥೆಯಿಂದ ಪಾವತಿಸಲಾಗುತ್ತಿರುವ ಮಾಸಿಕ ಬಡ್ಡಿ ಹಣವೆಷ್ಟು ;

(ಈ) ಸರ್ಕಾರದಿಂದ ಸರಿಯಾದ ಸಮಯಕ್ಕೆ ಸಂಸ್ಥೆಗೆ ಹಣ ಬಾರದೇ ಇರುವುದರಿಂದ ಸಾರಿಗೆ ಸಂಸ್ಥೆಯು ಆರ್ಥಿಕವಾಗಿ ಮತ್ತು ದಿನನಿತ್ಯದ ಕಾರ್ಯಚಟುವಟಿಕೆಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ಸಾರಿಗೆ ಸಂಸ್ಥೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರಿಗೆ ವೇತನ ಪರಿಷ್ಕರಣೆ ಯಾವ ವರ್ಷದಲ್ಲಿ ಆಗಬೇಕಿತ್ತು ಹಾಗೂ ವೇತನ ಪರಿಷ್ಕರಣೆ ಮಾಡಲಾಗಿದೆಯೇ ;

(ಊ) ನೌಕರರಿಗೆ ಬಹಳ ವರ್ಷಗಳಿಂದ ವೇತನ ಪರಿಷ್ಕರಣೆ ಮಾಡದೇ ಇರುವುದರಿಂದ ನೌಕರರು ಆರ್ಥಿಕ ಸಂಕಷ್ಟದಲ್ಲಿ ಸಿಲುಕಿ ಕಷ್ಟ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

## ಬಸ್‌ಗಳಲ್ಲಿ ಪ್ರಯಾಣಿಕರ ಸುರಕ್ಷತೆಗಾಗಿ ನೀತಿ ನಿಯಮಗಳನ್ನು ರೂಪಿಸುವ ಬಗ್ಗೆ

**ಡಾ: ಉಮಾಶ್ರೀ (ನಾಮನಿರ್ದೇಶನ ಹೊಂದಿದವರು) –**

೧೭೧ (೧೯೯೧) ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಇತ್ತೀಚಿಗೆ ಸ್ಲೀಪರ್ ಕೋಚ್ ಬಸ್‌ಗಳಲ್ಲಿ ಬೆಂಕಿ ಕಾಣಿಸಿಕೊಳ್ಳುವ ಪ್ರಕರಣಗಳು ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಪ್ರಯಾಣಿಕರ ಸುರಕ್ಷತೆಗಾಗಿ ಸರ್ಕಾರ ಯಾವ ರೀತಿ ಕ್ರಮಕೈಗೊಂಡಿದೆ ;

(ಆ) ಸರ್ಕಾರಿ ಮತ್ತು ಖಾಸಗಿ ಸ್ಲೀಪರ್ ಹಾಗೂ ಐಷಾರಾಮಿ ಬಸ್‌ಗಳಲ್ಲಿ ಪ್ರಯಾಣಿಕರೊಂದಿಗೆ ಸರಕು ಸಾಗಾಣಿಕೆ (Parcel) ಹೆಚ್ಚಾಗಿ ಮಾಡುತ್ತಿರುವ ಹಿನ್ನೆಲೆಯಲ್ಲಿ ಅಗ್ನಿ ಅವಘಡ ಹೆಚ್ಚಾಗುತ್ತಿರುವುದು ಸರ್ಕಾರ ಗಮನಿಸಿದೆಯೇ ;

(ಇ) ಹಾಗಿದ್ದಲ್ಲಿ, ಇದಕ್ಕೆ ಸೂಕ್ತವಾದ ನೀತಿ ನಿಯಮಗಳನ್ನು ರೂಪಿಸಲಾಗಿದೆಯೇ ಹಾಗೂ ನಿಯಮಗಳನ್ನು ಉಲ್ಲಂಘಿಸಿದವರಿಗೆ ಯಾವ ಶಿಕ್ಷೆಯನ್ನು ವಿಧಿಸಲಾಗುವುದು ?

## ಕರ್ನಾಟಕವನ್ನು ಕೊಳಗೇರಿ ಮುಕ್ತ ರಾಜ್ಯವನ್ನಾಗಿಸುವ ಬಗ್ಗೆ

**ಡಾ: ಕೆ. ಗೋವಿಂದರಾಜ್ (ವಿಧಾನಸಭೆಯಿಂದ ಚುನಾಯಿತರಾದವರು) –**

೧೭೨ (೧೬೨೬) ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಕೊಳಗೇರಿ ಪ್ರದೇಶಗಳು ಎಷ್ಟು ; ಈ ಕೊಳಗೇರಿ ಪ್ರದೇಶಗಳಲ್ಲಿ ವಾಸಿಸುತ್ತಿರುವ ಜನಸಂಖ್ಯೆ ಎಷ್ಟು ; (ಜಿಲ್ಲಾವಾರು ವಿವರಗಳನ್ನು ನೀಡುವುದು)

(ಆ) ಕೊಳಗೇರಿ ಪ್ರದೇಶಗಳನ್ನು ಅಭಿವೃದ್ಧಿಪಡಿಸಲು "ಕೊಳಗೇರಿ ಅಭಿವೃದ್ಧಿ ಮಂಡಳಿ"ಯನ್ನು ರಚಿಸಿ ೫೧ ವರ್ಷವಾಗಿದ್ದು, ಇಲ್ಲಿಯವರಿಗೆ ಕೊಳಗೇರಿ ಮುಕ್ತ ಆದ ಸ್ಲಂಗಳ ಸಂಖ್ಯೆ ಎಷ್ಟು ; ಇನ್ನೂ ಅಭಿವೃದ್ಧಿಯಾಗದ ಸ್ಲಂಗಳ ಸಂಖ್ಯೆ ಎಷ್ಟು ; "ಕೊಳಗೇರಿ ಅಭಿವೃದ್ಧಿ ಮಂಡಳಿ" ಸ್ಥಾಪನೆಯ ಉದ್ದೇಶ ಈಡೇರಿದೆಯೇ ; (ವಿವರಗಳನ್ನು ನೀಡುವುದು)

(ಇ) ಕೊಳಗೇರಿ ಪ್ರದೇಶಗಳಲ್ಲಿ ವಾಸಿಸುವ ಜನರಿಗೆ, ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿವಿಧ ವಸತಿ ಯೋಜನೆಗಳ ಅಡಿಯಲ್ಲಿ ಎಷ್ಟು ಮನೆಗಳನ್ನು ನಿರ್ಮಿಸಿ ಕೊಡಬೇಕೆಂಬ ಗುರಿಯನ್ನು ಹಾಕಿಕೊಳ್ಳಲಾಗಿದೆ ; ಎಷ್ಟು ಮನೆಗಳನ್ನು ಪೂರ್ಣಗೊಳಿಸಿ ಹಕ್ಕುಪತ್ರಗಳನ್ನು ನೀಡಲಾಗಿದೆ ;

(ಈ) ಕಳೆದ ಐದು ವರ್ಷಗಳಲ್ಲಿ ಕೊಳಗೇರಿ ಪ್ರದೇಶಗಳ ಅಭಿವೃದ್ಧಿಗೆ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ ; ಕೊಳಗೇರಿ ಮುಕ್ತ ಕರ್ನಾಟಕ ಮಾಡಲು ಸರ್ಕಾರ ಮುಂದಾಗುವುದೇ ?

## ಕಲಬುರಗಿ ಜಿಲ್ಲೆಯಲ್ಲಿ ವಸತಿ ಕಾರ್ಯಕ್ರಮಗಳು

**ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಭೆಯಿಂದ ಚುನಾಯಿತರಾದವರು) –**

೧೭೩ (೧೬೪೫) ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಲಬುರಗಿ ಜಿಲ್ಲೆಯಲ್ಲಿ ಪ್ರಸ್ತುತ ವಸತಿ ರಹಿತ ಕುಟುಂಬಗಳ ಸಂಖ್ಯೆ ಎಷ್ಟು ; ಇವುಗಳಲ್ಲಿ ಎಷ್ಟು ಕುಟುಂಬಗಳಿಗೆ ವಸತಿ ಸೌಲಭ್ಯ ಕಲ್ಪಿಸಲು ಸರ್ಕಾರ ಕ್ರಮಕೈಗೊಂಡಿದೆ ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಕಳೆದ ೩ ವರ್ಷಗಳಲ್ಲಿ ಕಲಬುರಗಿ ಜಿಲ್ಲೆಯಲ್ಲಿ ವಿವಿಧ ವಸತಿ ಯೋಜನೆಗಳಡಿ ಎಷ್ಟು ವಸತಿ ರಹಿತ ಫಲಾನುಭವಿಗಳಿಗೆ ಮನೆಗಳನ್ನು ಹಂಚಿಕೆ ಮಾಡಲಾಗಿದೆ ; (ಯೋಜನೆವಾರು/ವರ್ಷವಾರು ವಿವರ ನೀಡುವುದು)

(ಇ) ಜಿಲ್ಲೆಯಲ್ಲಿರುವ ಗುಡಿಸಲು ಮುಕ್ತಗೊಳಿಸಿ ವಾಸಯೋಗ್ಯ ಮನೆಗಳನ್ನಾಗಿ ಪರಿವರ್ತಿಸಲು ಸರ್ಕಾರ ಕೈಗೊಂಡಿರುವ ವಿಶೇಷ ಕ್ರಮಗಳೇನು ;

(ಈ) ಕಟ್ಟಡ ನಿರ್ಮಾಣ ಸಾಮಗ್ರಿಗಳ ಬೆಲೆ ಏರಿಕೆಯಾಗಿರುವುದರಿಂದ ಕಲಬುರಗಿ ಅಂತಹ ಹಿಂದುಳಿದ ಜಿಲ್ಲೆಗಳಲ್ಲಿ ವಸತಿ ಯೋಜನೆಗಳ ಅಡಿ ನೀಡುವ ಸಹಾಯಧನವನ್ನು ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ; ಇಲ್ಲದಿದ್ದಲ್ಲಿ, ಸರ್ಕಾರ ಕೈಗೊಳ್ಳಲಿರುವ ಪರ್ಯಾಯ ಕ್ರಮಗಳೇನು ?

## ಧಾರವಾಡ ಜಿಲ್ಲೆಯ ಅಳ್ನಾವರ ತಾಲ್ಲೂಕಿನ ದುರ್ಗದ ಕೆರೆಯ ಹತ್ತಿರದ ೪೦೦೦ ಎಕರೆ ಭೂಮಿಯ ಮಾಲೀಕತ್ವ ಹಾಗೂ ಸಾಗುವಳಿ ಚೀಟಿ ಹಂಚಿಕೆಯ ಅಕ್ರಮ ಬಗ್ಗೆ

**ಶ್ರೀ ಎಫ್.ಹೆಚ್. ಜಕ್ಕಪ್ಪನವರ್ (ನಾಮನಿರ್ದೇಶನ ಹೊಂದಿದವರು) –**

೧೭೪ (೧೬೨೩) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಧಾರವಾಡ ಜಿಲ್ಲೆಯ ಅಳ್ನಾವರ ತಾಲ್ಲೂಕಿನ ದುರ್ಗದ ಕೆರೆ ಸುತ್ತಮುತ್ತಲಿನ ಸುಮಾರು ೪೦೦೦ ಎಕರೆ ಕೃಷಿ ಭೂಮಿಯು ಪ್ರಸ್ತುತ ಯಾರ ಮಾಲೀಕತ್ವದಲ್ಲಿದೆ ; (ಸಂಪೂರ್ಣ ಸರ್ವೇ ನಂಬರ್‌ವಾರು ಮತ್ತು ವಿಸ್ತೀರ್ಣದ ವಿವರ ನೀಡುವುದು)

(ಆ) ಸದರಿ ಕೃಷಿ ಭೂಮಿಯು 'ಕರ್ನಾಟಕ ಭೂ ಸುಧಾರಣಾ ಕಾಯ್ದೆ'ಯಡಿ ನಿಗದಿಪಡಿಸಿದ ಭೂ ಮಿತಿಗೆ (Land Ceiling) ಒಳಪಟ್ಟಿದೆಯೇ ; ಒಂದು ವೇಳೆ ಒಳಪಡದಿದ್ದಲ್ಲಿ, ಇಷ್ಟು ದೊಡ್ಡ ಪ್ರಮಾಣದ ಭೂಮಿಯು ಒಬ್ಬರ ಅಥವಾ ಒಂದು ಸಂಸ್ಥೆಯ ಹೆಸರಿನಲ್ಲಿ ಇರಲು ಇರುವ ಕಾನೂನಾತ್ಮಕ ಕಾರಣಗಳೇನು ; ಇದಕ್ಕೆ ಸರ್ಕಾರದಿಂದ ಯಾವುದಾದರೂ ವಿಶೇಷ ವಿನಾಯಿತಿ ನೀಡಲಾಗಿದೆಯೇ ;

(ಇ) ಈ ಭೂಮಿಯಲ್ಲಿ ಸರ್ಕಾರಿ ಅಧಿಕಾರಿಗಳು ಅಥವಾ ಅವರ ಕುಟುಂಬದ ಸದಸ್ಯರು ಸಾಗುವಳಿ ಮಾಡುತ್ತಿರುವುದು ಮತ್ತು ನಿಯಮಬಾಹಿರವಾಗಿ ಸಾಗುವಳಿ ಚೀಟಿ (Saguvali Chit) ಪಡೆದುಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಒಂದು ವೇಳೆ ಅಧಿಕಾರಿಗಳು ತಮ್ಮ ಅಧಿಕಾರ ದುರ್ಬಳಕ್ಕೆ ಮಾಡಿಕೊಂಡು ಅಕ್ರಮವಾಗಿ ಸಾಗುವಳಿ ಚೀಟಿ ಪಡೆದಿರುವುದು ದೃಢಪಟ್ಟಲ್ಲಿ, ಅಂತಹ ಅಧಿಕಾರಿಗಳ ವಿರುದ್ಧ ಮತ್ತು ಈ ಅಕ್ರಮಕ್ಕೆ ಸಹಕರಿಸಿದ ಸಿಬ್ಬಂದಿಗಳ ಮೇಲೆ ಸರ್ಕಾರ ಕೈಗೊಂಡಿರುವ ಅಥವಾ ಕೈಗೊಳ್ಳಲಿರುವ ಶಿಸ್ತು ಕ್ರಮಗಳೇನು ?

## ವೈಷ್ಣೋದೇವಿ ಯಾತ್ರೆಗೆ ಸಹಾಯಧನ ನೀಡುವ ಯೋಜನೆ ಕುರಿತು

**ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ ) –**

೧೭೫ (೧೬೪೯) ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯ ಮುಜರಾಯಿ ಇಲಾಖೆಯು ಕಾಶಿ ಯಾತ್ರೆ ಮಾದರಿಯಲ್ಲಿ ಜಮ್ಮು–ಕಾಶ್ಮೀರದ 'ವೈಷ್ಣೋದೇವಿ' ಯಾತ್ರೆಗೂ ಸಹಾಯಧನ ನೀಡಲು ಚಿಂತನೆ ನಡೆಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಈ ಯಾತ್ರೆಗೆ ತಲಾ ಎಷ್ಟು ರೂಪಾಯಿಗಳ ಸಹಾಯಧನ ನೀಡಲು ಉದ್ದೇಶಿಸಲಾಗಿದೆ ಮತ್ತು ಈ ಯೋಜನೆಗೆ ಇಲಾಖೆಯು ರೂಪಿಸಿರುವ ಮಾರ್ಗಸೂಚಿಗಳೇನು ; (ವಿವರ ನೀಡುವುದು)

(ಇ) ಈಗಾಗಲೇ ಕಾಶಿ, ಚಾರ್‌ಧಾಮ್ ಮತ್ತು ಮಾನಸ ಸರೋವರ ಯಾತ್ರೆಗಳಿಗೆ ನೀಡಲಾಗುತ್ತಿರುವ ಸಹಾಯಧನದ ಮೊತ್ತ ಎಷ್ಟು ಹಾಗೂ ಕಳೆದ ವರ್ಷ (೨೦೨೫ರಲ್ಲಿ) ಈ ಯೋಜನೆಗಳಡಿ ಎಷ್ಟು ಫಲಾನುಭವಿಗಳು ಪ್ರಯೋಜನ ಪಡೆದಿದ್ದಾರೆ ;

(ಈ) ವೈಷ್ಣೋದೇವಿ ಯಾತ್ರಾರ್ಥಿಗಳಿಗೆ ರೈಲ್ವೆ ಇಲಾಖೆಯ ಸಹಯೋಗದೊಂದಿಗೆ ರಿಯಾಯಿತಿ ದರದ ಟಿಕೆಟ್ ಅಥವಾ ವಿಶೇಷ ಸೌಲಭ್ಯ ಒದಗಿಸುವ ಕುರಿತು ಸರ್ಕಾರವು ಕೈಗೊಂಡಿರುವ ಕ್ರಮಗಳೇನು ;

(ಉ) ಈ ಯೋಜನೆಯನ್ನು ಯಾವಾಗಿನಿಂದ ಜಾರಿಗೆ ತರಲು ಸರ್ಕಾರ ನಿರ್ಧರಿಸಿದೆ ಮತ್ತು ಇದಕ್ಕಾಗಿ ಕಾಯ್ದಿರಿಸಲಾದ ಅಂದಾಜು ಅನುದಾನವೆಷ್ಟು ?

## ಮೀನುಗಾರರಿಗೆ ಇಲಾಖೆಯಿಂದ ನೀಡಲಾದ ಮನೆಗಳ ಕುರಿತು

**ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ ) –**

೧೭೬ (೧೯೯) ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಕಳೆದ ೩ ವರ್ಷದಲ್ಲಿ ಮೀನುಗಾರಿಕಾ ವೃತ್ತಿ ನಡೆಸುವವರಿಗೆ ಮಂಜೂರು ಮಾಡಲಾದ ಒಟ್ಟು ಮನೆಗಳ ಸಂಖ್ಯೆ ಎಷ್ಟು ; ಆಯ್ಕೆ ಮಾಡಲಾದ ಫಲಾನುಭವಿಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಸದರಿ ಮನೆ ಮಂಜೂರಾತಿಗೊಳಿಸಲು ಫಲಾನುಭವಿಗೆ ಇರಬೇಕಾದ ಅರ್ಹತೆಗಳು ಏನು ;

(ಇ) ಸದರಿ ಮನೆ ನಿರ್ಮಿಸುವ ಪೂರ್ವದಲ್ಲಿ ಫಲಾನುಭವಿಯ ಜಮೀನನ್ನು ಭೂ ಪರಿವರ್ತನೆಗೊಳಿಸುವ ಮತ್ತು ನಿವೇಶನಕ್ಕೆ ವಿನ್ಯಾಸ ಅನುಮೋದನೆ ಮತ್ತು ಖಾತಾ ಪ್ರಮಾಣ ಪತ್ರ ಪಡೆಯುವ ಅಗತ್ಯವಿದೆಯೇ ; ಸದರಿ ಪ್ರಕ್ರಿಯೆಯಿಂದ ವಿನಾಯಿತಿ ನೀಡಲಾಗಿದೆಯೇ ; (ವಿನಾಯಿತಿ ನೀಡಲಾಗಿದ್ದಲ್ಲಿ, ಸರ್ಕಾರದ ಆದೇಶದ ಪ್ರತಿ ನೀಡುವುದು)

(ಈ) ಮಂಜೂರಾದ ಮನೆಗಳನ್ನು ನಿರ್ಮಿಸಲು ಫಲಾನುಭವಿಯು ಕಟ್ಟಡ ಲೈಸೆನ್ಸ್ ಪಡೆಯುವುದು ಕಡ್ಡಾಯವೇ ; ಕಡ್ಡಾಯವಾಗಿದ್ದಲ್ಲಿ, ಸದರಿ ಲೈಸೆನ್ಸ್ ವಿತರಿಸುವ ಪ್ರಾಧಿಕಾರ ಯಾವುದು ;

(ಉ) ಕಳೆದ ಮೂರು ವರ್ಷಗಳಿಂದ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗೆ ಮಂಜೂರು ಮಾಡಲಾದ ಮನೆಗಳಿಗೆ ಕಟ್ಟಡ ಲೈಸನ್ಸ್ ಮತ್ತು ಪೂರ್ಣಗೊಂಡ ಮನೆಗಳಿಗೆ ಕದನಂಬ್ರ ನೀಡಲು ಬಾಕಿ ಇರುವ ಫಲಾನುಭವಿಗಳ ವಿವರವನ್ನು ಗ್ರಾಮ ಪಂಚಾಯತ್‌ವಾರು ನೀಡುವುದು ಸದರಿ ಕಟ್ಟಡ ಲೈಸೆನ್ಸ್ ಮತ್ತು ಕದನಂಬ್ರ ನೀಡಲು ಬಾಕಿ ಇದ್ದಲ್ಲಿ ಕಾರಣವೇನು ;

(ಊ) ೨೦೨೩–೨೪ನೇ ಸಾಲಿನ ನಂತರ ವಿತರಿಸಲಾದ ಮನೆಗಳ ಪೈಕಿ ತಳಪಾಯ, ಗೋಡೆ, ಚಾವಣಿ ಮತ್ತು ಪೂರ್ಣಗೊಂಡ ಫಲಾನುಭವಿಗಳ ಪೈಕಿ ವಿವಿಧ ಹಂತಗಳಲ್ಲಿ ಅನುದಾನ ಬಿಡುಗಡೆಗೊಳಿಸಲು ಬಾಕಿ ಇರುವ ಫಲಾನುಭವಿಗಳು ಎಷ್ಟು ? (ಜಿಲ್ಲಾವಾರು ಮಾಹಿತಿ ನೀಡುವುದು)

## ಕಂದಾಯ ಇಲಾಖೆಗೆ ಸಂಬಂಧಪಟ್ಟಂತೆ ಉಸ್ತುವಾರಿ ಕಾರ್ಯದರ್ಶಿಗಳ ಮಾಹಿತಿ ಕುರಿತು

**ಶ್ರೀ ರಮೇಶ್ ಬಾಬು (ನಾಮನಿರ್ದೇಶನ ಹೊಂದಿದವರು) –**

೧೭೭ (೧೬೭೭) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯ ಸರ್ಕಾರದ ಕಂದಾಯ ಇಲಾಖೆ ಕರ್ನಾಟಕದ ಪ್ರತಿ ತಾಲ್ಲೂಕಿಗೆ ಮತ್ತು ಉಪ ವಿಭಾಗಾಧಿಕಾರಿಗಳ ಹಾಗೂ ಜಿಲ್ಲಾಧಿಕಾರಿಗಳ ವ್ಯಾಪ್ತಿಯಲ್ಲಿ ಉಸ್ತುವಾರಿ ಅಧಿಕಾರಿಗಳನ್ನು ನೇಮಿಸಿದೆಯೇ ; ನೇಮಿಸಿದ್ದಲ್ಲಿ, ಅದರ ಪೂರ್ಣ ವಿವರಗಳನ್ನು ಒದಗಿಸುವುದು ;

(ಆ) ತಾಲ್ಲೂಕು ಕಂದಾಯ ಇಲಾಖೆಗೆ ಉಸ್ತುವಾರಿಯಾಗಿ ನೇಮಿಸಿರುವ ಅಧಿಕಾರಿಗಳು ಕಳೆದ ಮೂರು ವರ್ಷಗಳಲ್ಲಿ ಎಷ್ಟು ಸಭೆಗಳನ್ನು ನಡೆಸಿರುತ್ತಾರೆ ; ಅದರ ವಿವರಗಳನ್ನು ಒದಗಿಸುವುದು ;

(ಇ) ಕಂದಾಯ ಇಲಾಖೆಯ ವತಿಯಿಂದ ಪ್ರತಿ ವಿಭಾಗಾಧಿಕಾರಿಗೆ ಸಹಾಯಕ ಉಪ ವಿಭಾಗಾಧಿಕಾರಿ ವ್ಯಾಪ್ತಿಯಲ್ಲಿ ಸರ್ಕಾರ ಉಸ್ತುವಾರಿಗಳನ್ನು ನೇಮಿಸಿದೆಯೇ ; ನೇಮಿಸಿದ್ದಲ್ಲಿ, ಅದರ ವಿವರ ಮತ್ತು ಅವರು ನಡೆಸಿರುವ ಸಭೆಗಳ ವಿವರಗಳನ್ನು ಒದಗಿಸುವುದು ;

(ಈ) ಕಂದಾಯ ಇಲಾಖೆಯಲ್ಲಿ ಪ್ರತಿ ಜಿಲ್ಲೆಗೆ ಜಿಲ್ಲಾಧಿಕಾರಿಗಳ ಉಸ್ತುವಾರಿಗೆ ರಾಜ್ಯ ಸರ್ಕಾರ ಹಿರಿಯ ಐಎಎಸ್ ಅಧಿಕಾರಿಗಳನ್ನು ಉಸ್ತುವಾರಿಯಾಗಿ ನೇಮಿಸಿದೆಯೇ ; ನೇಮಿಸಿದ್ದಲ್ಲಿ, ಯಾವಾಗ ನೇಮಿಸಲಾಗಿದೆ ; ಕಳೆದ ಮೂರು ವರ್ಷಗಳಲ್ಲಿ ನಡೆಸಿರುವ ಸಭೆಯ ವಿವರಗಳನ್ನು ಒದಗಿಸುವುದು ;

(ಉ) ರಾಜ್ಯದ ಕಂದಾಯ ಇಲಾಖೆಯಲ್ಲಿ ಎಷ್ಟು ವಿಭಾಗಗಳು ಇರುತ್ತದೆ ; ವಿಭಾಗವಾರು ಉನ್ನತ ಮಟ್ಟದ ಅಧಿಕಾರಿಗಳನ್ನು ಉಸ್ತುವಾರಿಯಾಗಿ ನೇಮಿಸಲಾಗಿದೆಯೇ ; ನೇಮಿಸಿದ್ದಲ್ಲಿ, ಅದರ ವಿವರಗಳನ್ನು ಮತ್ತು ಅವರು ನಡೆಸಿರುವ ಸಭೆಗಳ ಮೂರು ವರ್ಷದ ಮಾಹಿತಿಯನ್ನು ಒದಗಿಸುವುದು ?

## ಬೆಂಗಳೂರು ಯಶವಂತಪುರ ಹೋ॥ ಹೇರೋಹಳ್ಳಿಯಲ್ಲಿ ಅಕ್ರಮವಾಗಿ ಗೋಮಾಳ ಮತ್ತು ರೈತರ ಜಾಗ ಕಬಳಿಸಿರುವ ಬಗ್ಗೆ

**ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು) –**

೧೭೮ (೧೬೫೮) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರ ಯಶವಂತಪುರ ಹೋಬಳಿ ಹೇರೋಹಳ್ಳಿ ಮತ್ತು ಶ್ರೀ ಗಂಧದ ಕಾವಲೂ ಗ್ರಾಮಕ್ಕೆ ಸಂಬಂಧಿಸಿದಂತೆ ಜಮಿನಾಲಾಲ್ ಬಜಾಜ್ ಸೇವಾ ಟ್ರಸ್ಟ್ ಎಂಬ ಸಂಸ್ಥೆಗೆ ಅಕ್ರಮವಾಗಿ ಕಾನೂನು ಬಾಹಿರವಾಗಿ ಕ್ರಯ ಪತ್ರ ಸೃಷ್ಟಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರ ಯಾವ ಕ್ರಮ ಕೈಗೊಂಡಿದೆ ;

(ಆ) ಸದರಿ ಗ್ರಾಮಕ್ಕೆ ಸಂಬಂಧಿಸಿದಂತೆ ಜಮಿನಾಲಾಲ್ ಬಜಾಜ್ ಸೇವಾ ಟ್ರಸ್ಟ್‌ಗೆ ಅನುಕೂಲವಾಗುವ ರೀತಿಯಲ್ಲಿ ಕಂದಾಯ ದಾಖಲೆಗಳ ತಿದ್ದುಪಡಿ ಮಾಡಿದ ಅಧಿಕಾರಿಗಳ ಮೇಲೆ ದೂರು ಸಲ್ಲಿಕೆಯಾಗಿದೆಯೇ ; ಹಾಗಿದ್ದಲ್ಲಿ, ಸರ್ಕಾರ ಅಂತಹ ಅಧಿಕಾರಿಗಳ ಮೇಲೆ ಯಾವ ಕ್ರಮ ಕೈಗೊಂಡಿದೆ ;

(ಇ) ಈ ವಿಷಯ ಕುರಿತು ದೂರುಗಳು ಬಂದಿದೆಯೇ ; ಬಂದಿದ್ದಲ್ಲಿ, ದೂರಿನ ಪ್ರತಿ ಒದಗಿಸುವುದು ; ಆ ದೂರುಗಳ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು ; (ದಾಖಲಾತಿಯೊಂದಿಗೆ ನೀಡುವುದು)

(ಈ) ಬೆಂಗಳೂರು ನಗರ ಯಶವಂತಪುರ ಹೋಬಳಿ ಹೇರೋಹಳ್ಳಿ ಈ ಹಿಂದೆ ಸರ್ವೆ ನಂ: ೫೨ ವಿಸ್ತೀರ್ಣ ೬೩ ಎಕರೆಯು ಸರ್ಕಾರಿ ಗೋಮಾಳ ಜಾಗವಾಗಿದ್ದು ಸದರಿ ಜಾಗವನ್ನು ಕಬಳಿಸಲು ಹಲವಾರು ದಾಖಲೆಗಳನ್ನು ಸೃಷ್ಟಿಸಿರುವ ಬಗ್ಗೆ ಸರ್ಕಾರದ ನಿಲುವೇನು ;

(ಉ) ಜಮನಾಲಾಲ್ ಬಜಾಜ್ ಸೇವಾ ಟ್ರಸ್ಟ್‌ನ ಕ್ರಯಪತ್ರ ಮತ್ತು ನೋಂದಣಿ ಕ್ರಯಪತ್ರಗಳ ಸದರಿ ದಾಖಲೆಗಳು ಸೃಷ್ಠಿಕೃತವಾಗಿದೆ ಎಂದು ಈಗಾಗಲೇ ಗಂಭೀರ ಆರೋಪವನ್ನು ದೂರುದಾರರು ನೀಡಿದ್ದು ಇದರ ಬಗ್ಗೆ ಸರ್ಕಾರ ತನಿಖೆ ನಡೆಸಲಾಗಿದೆಯೇ ; ನಡೆಸದಿದ್ದಲ್ಲಿ, ವಿಳಂಬವಾಗುತ್ತಿರುವುದಕ್ಕೆ ಕಾರಣವೇನು ; (ಕ್ರಯಪತ್ರವನ್ನು ನೋಂದಣಿ ಕ್ರಯಪತ್ರದೊಂದಿಗೆ ಸಂಪೂರ್ಣ ಮಾಹಿತಿಯನ್ನು ದೃಢೀಕರಿಸಿ ನೀಡುವುದು)

(ಊ) ಹೇರೋಹಳ್ಳಿ ಮತ್ತು ಶ್ರೀ ಗಂಧದ ಕಾವಲೂ ಗ್ರಾಮಕ್ಕೆ ಸಂಬಂಧಿಸಿದಂತೆ ಈ ಹಿಂದೆ ನಡೆದಿರುವ ಎಲ್ ಆರ್ ಎಫ್ ಪ್ರಕರಣ ಸಂಖ್ಯೆ ೧೯೦/ ೧೯೭೪-೭೫ರ ಆದೇಶದ ಪ್ರತಿ ಮತ್ತು ಇದಕ್ಕೆ ಸಂಬಂಧಿಸಿದ ಮೂಲ ದಾಖಲಾತಿಗಳನ್ನು ನೀಡುವುದು ;

(ಋ) ಸದರಿ ಜಮೀನುಗಳ ಬಗ್ಗೆ ಘನ ನ್ಯಾಯಾಲಯಗಳಲ್ಲಿ ಹಲವಾರು ವರ್ಷಗಳಿಂದಲೂ ವ್ಯಾಜ್ಯಗಳು ಸರ್ಕಾರ ಮತ್ತು ಜಮುನಾಲಾಲ್ ಬಜಾಜ್

ಸೇವಾ ಟ್ರಸ್ಟ್ ಮಧ್ಯೆ ನಡೆದಿದ್ದು, ವಾಸ್ತಾವಾಂಶದಲ್ಲಿ ಭೂ ಮಾಲೀಕತ್ವದ ಬಗ್ಗೆ ಸರ್ಕಾರದ ವತಿಯಿಂದ ಯಾವುದೇ ಆಕ್ಷೇಪಗಳನ್ನಾಗಲಿ ಅಧಿಕೃತ ದಾಖಲೆಗಳನ್ನಾಗಲಿ ಸಲ್ಲಿಕೆ ಮಾಡಿರುವುದಿಲ್ಲ ; ಮತ್ತು ಭೂ ವ್ಯಾಜ್ಯಗಳ ನ್ಯಾಯಾಲಯಗಳಲ್ಲಿ ಬಾಕಿ ಇರುವ ಹಂತದಲ್ಲೇ ಆರೋಪಿತ ಟ್ರಸ್ಟ್‌ಗೆ ಪರಿಹಾರ ನೀಡಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ ; ಈ ಪ್ರಕರಣದಲ್ಲಿ ಅಧಿಕಾರಿ ವರ್ಗದವರು ಶಾಮೀಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರದ ನಿಲುವೇನು ?

## ತಾಲ್ಲೂಕು ಕಚೇರಿಗಳ ಆಡಳಿತ ಮತ್ತು ಸಿಬ್ಬಂದಿಗಳ ಕುರಿತು

**ಶ್ರೀ ಕೆ. ಅಬ್ದುಲ್ ಜಬ್ಬರ್ (ವಿಧಾನಸಭೆಯಿಂದ ಚುನಾಯಿತರಾದವರು) –**

೧೭೯ (೧೯೯೭) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ತಾಲ್ಲೂಕು ಕಚೇರಿಗಳಲ್ಲಿ ಹಾಗೂ ನಾಡಕಚೇರಿಗಳಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು/ಹುದ್ದೆವಾರು ಮಾಹಿತಿ ಒದಗಿಸುವುದು)

(ಆ) ಈ ಕಚೇರಿಗಳಿಗೆ ಬರುವ ಅರ್ಜಿಗಳ ವಿಲೇವಾರಿ ಹಾಗೂ ಸೇವೆಗಳನ್ನು ಸುಧಾರಣೆ ತಂದು ತ್ವರಿತಗತಿಯಲ್ಲಿ ನಡೆಸಲು ಸರ್ಕಾರ ಕೈಗೊಂಡ ಕ್ರಮಗಳು ಯಾವುವು ;

(ಇ) ತಾಲ್ಲೂಕು ಕಚೇರಿಗಳಲ್ಲಿ ಅಕ್ರಮಗಳು ಹಾಗೂ ದಲ್ಲಾಳಿಗಳ ಹಾವಳಿಗಳನ್ನು ತಪ್ಪಿಸಲು ಸರ್ಕಾರ ಕೈಗೊಂಡ ಸೂಕ್ತ ಕ್ರಮಗಳು ಯಾವುವು ;

(ಈ) ನಾಡಕಚೇರಿಗಳ ಸೇವೆಗಳನ್ನು ಸುಧಾರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ;

(ಉ) ಭೂವ್ಯವಹಾರಗಳಲ್ಲಿ ಭ್ರಷ್ಟಾಚಾರ ತಡೆಗಟ್ಟಲು ತೆಗೆದುಕೊಂಡ ಕ್ರಮಗಳೇನು ?

## ಪೋಡಿ ಇತ್ಯರ್ಥ ಪ್ರಕರಣಗಳು ಬಾಕಿ ಇರುವ ಬಗ್ಗೆ

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ. (ವಿಧಾನಸಭೆಯಿಂದ ಚುನಾಯಿತರಾದವರು) –**

೧೮೦ (೧೬೬೫) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಪೋಡಿ ಇತ್ಯರ್ಥಕ್ಕೆ ಬಾಕಿ ಇರುವ ಪ್ರಕರಣಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇದ್ದು, ರೈತರು ತಮ್ಮ ಜಮೀನುಗಳಿಗೆ ಪೋಡಿ ಮಾಡಿಸಿಕೊಳ್ಳಲು ಕಛೇರಿಗಳಿಗೆ ನಿತ್ಯ ಅಲೆದಾಡಬೇಕಾದ ಅನಿವಾರ್ಯತೆ ಸೃಷ್ಟಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಪೋಡಿ ಇತ್ಯರ್ಥಕ್ಕೆ ರಾಜ್ಯಾದ್ಯಂತ ಪ್ರಸ್ತುತ ಬಾಕಿ ಇರುವ ಪ್ರಕರಣಗಳ ಒಟ್ಟು ಸಂಖ್ಯೆ ಎಷ್ಟು ; (ಜಿಲ್ಲಾವಾರು ಪ್ರತ್ಯೇಕ ವಿವರ ನೀಡುವುದು)

(ಇ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೂಡ ಪೋಡಿ ಇತ್ಯರ್ಥದ ಅತೀ ಹೆಚ್ಚು ಪ್ರಕರಣಗಳು ದೀರ್ಘಕಾಲದಿಂದ ಬಾಕಿ ಇದ್ದು, ಜಿಲ್ಲೆಯಲ್ಲಿ ತ್ವರಿತವಾಗಿ ವಿಲೇವಾರಿ ಮಾಡಲು ಸರ್ಕಾರ ಇದುವರೆಗೆ ಯಾವುದೇ ಸೂಕ್ತ ಹಾಗೂ ಅಗತ್ಯ ಕ್ರಮ ವಹಿಸದಿರಲು ಕಾರಣಗಳೇನು ;

(ಈ) ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಅರ್ಜಿಗಳು ಅತೀ ದೀರ್ಘಕಾಲದಿಂದ ಹಾಗೆಯೇ ಬಾಕಿ ಉಳಿದಿದ್ದು, ಯಾವ ಕಾಲಮಿತಿಯೊಳಗೆ ಜಿಲ್ಲೆಯಲ್ಲಿ ಬಾಕಿ ಇರುವ ಎಲ್ಲಾ ಪ್ರಕರಣಗಳನ್ನು ಸಂಪೂರ್ಣವಾಗಿ ವಿಲೇವಾರಿ ಮಾಡಲಾಗುವುದು ?

**ಕೆ.ಆರ್. ಮಹಾಲಕ್ಷ್ಮಿ**

ಕಾರ್ಯದರ್ಶಿ

ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ವಿಕಾಸಸೌಧ, ಬೆಂಗಳೂರು,

**List of Questions for Oral Answers**

**Total No. of Questions - 15**

# LIST - 12

# KARNATAKA LEGISLATIVE COUNCIL

## ONE HUNDRED AND FIFTY EIGHTH SESSION

## (Adjourned Meetings)

## Wednesday, the 18th March, 2026

---

**GROUP - III**

1. Minister for Transport and Muzrai
2. Minister for Public Works
3. Minister for Revenue
4. Minister for Housing, Wakf and Minority Welfare
5. Minister for Animal Husbandry and Sericulture
6. Minister for Fisheries and Ports and Inland Water Transport

---

**DREDGING OF SILT AND REMOVAL OF SAND DUNE IN ESTUARIES IN FISHERIES PORTS**

**Sri. Manjunatha Bhandari (Local Authorities Constituency) -**

166 (1672) Will the Minister for Fisheries and Ports and Inland Water Transport be pleased to state :-

(a) the number of accidents that have been occurred due to the trouble of silt filling during the last 30 years in various fisheries ports and estuaries of coastal districts ; the number of fishermen who have been deceased ; the number of boats which have been damaged ; the total loss that has been occurred thereof ;

(b) the number of times in which the dredging work has been taken up in the estuaries and fisheries ports during the previous years ; the grant that has been demanded for this work ; the details of the standard operating procedure that has been complied in this process ; (the details of yearwise expenditure be furnished)

(c) the required grant for complete dredging work and removal of sand dune in the estuaries ; the reasons for not having its own dredging machinery by the department in the State ; the decisions of the Government with regard to following the model of purchasing and operating a dredging machine by the Government in the State in the same manner of the Government of Kerala ;

(d) the measures of the department regarding the requisitions sought by the respective fisheries associations with regard to purchasing "cutting dredgers" instead of grab dredger ; there are allegations that the grant is being utilised by submitting bill merely without conducting actual dredging work in some ports, the investigation reports in this regard ;

(e) the decisions of the Government regarding the regular maintenance of dredging would be taken up compulsorily once in a year or minimum two year for the life protection of fishermen and smooth movement of ports ?

## REPLACEMENT OF OLD BUSES IN BALLARI AND VIJAYANAGAR DISTRICTS

**Sri. Y.M. Satish (Local Authorities Constituency) -**

167 (1602) Will the Minister for Transport and Muzrai be pleased to state :-

(a) the number of air conditioned, non-AC and transport buses in Ballari and Vijayanagar districts ;

(b) out of AC and non-AC and transport buses in Ballari and Vijayanagar districts, the number of buses that have been travelled 9.00 lakh kilometers ;

(c) out of AC, non-AC and transport buses which are operating in Ballari and Vijayanagar districts, the number of buses that are in scraping conditions ;

(d) whether the new buses have been provided by the Government to Kalyana Karnataka region from the year 2023-24 ; (depotswise and modelwise of buses information be furnished)

(e) the step that would be initiated by the Government to provide the new vehicles instead of the scrap condition of AC, non-AC and transport buses in Ballari and Vijayanagar districts ?

## LAND CONVERSION IN THE OFFICES OF THE DEPUTY COMMISSIONER AND ASSISTANT COMMISSIONER OF BENGALURU DISTRICT

**Sri. Ramojigowda (Graduates' Constituency) -**

168 (1575) Will the Minister for Revenue be pleased to state :-

(a) the number of land conversion and revenue related application that are pending in the offices of the Deputy Commissioner and Assistant Commissioner of Bengaluru Urban district ; (information be furnished)

(b) the average time taken for disposing the applications like caste, income and residence certificates ;

(c) whether it has come to the notice of the Government that the delay is being caused in Khata Transfer and renewal of land record ; if so, the steps taken by the Government to setright the same ; (information be furnished)

(d) the steps which are being taken by the Government to prevent the corruption and the interference of the mediators in the offices of Deputy Commissioner and Assistant Commissioner ;

(e) the details of the steps which are being implemented by the Government to reduce the grievances of public and improve the service delivery in revenue offices ?

(f) whether there is a shortage of staff in the offices of the Deputy Commissioner and Assistant Commissioner of Bengaluru urban ; the details of vacant posts be furnished;

(g) whether any proposal is before the Government to strengthen the infrastructure and manpower in Assistant Commissioner's office due to the increasing burden of workload in Bengaluru ?

**MENTION AS WAQF LAND IN THE RTC BASED ON THE GAZETTE NOTIFICATION**

**Sri. P.H. Pujar (Local Authorities Constituency) -**

169 (1595) Will the Minister for Revenue be pleased to state :-

(a) the extent of acres of the Government land like public burial ground, pasture land and other lands belonging to the Revenue Department that have been recorded in R.T.C only on the basis of gazette notification without any grant ; districtwise and talukwise information be furnished ;

(b) the properties that have been mentioned as waqf in the R.T.C based on only gazette notification without any sale deed, giftdeed, registration document and allotment letter ; districtwise and talukwise details of the property be furnished ;

(c) the action that has been initiated against the officers who have mentioned as waqf in the R.T.C based on only

gazette notification even though there are clear directions by the Supreme Court and High Court ;

(d) the extent of acres of land which has been taken into the possession that has been alienated illegally ; districtwise and talukwise information be furnished ?

## PENDING OF ARREARS TO TRANSPORT EMPLOYEES

**Smt. Bharathi Shetty (Nominated) -**

**Sri. Govinda Raju (Elected by Legislative Assembly) -**

170 (1701+1601) Will the Minister for Transport and Muzrai be pleased to state :-

(a) the date on which the free transport facility for women has been commenced ;

(b) the monthlywise amount that has been paid by the Government to the Transport Department from the said date till now ; if so, the details of monthlywise demand and payment be furnished ;

(c) the current financial condition of the Transport Corporation and the amount of monthly interest which is being paid by the Transport Corporation ;

(d) whether it has come to the notice of the Government that the hardship is being occurred to the Transport Corporation financially and on daily activities due to the delay in releasing of amount by the Government to the corporation on time ;

(e) the year in which the pay should have be on revised for the employees who are working in the Transport Corporation and whether the pay revision has been carriedout ;

(f) whether it has come to the notice of the Government that the employees are in severe distressed condition

financially due to the non-revision of pay for many years for the employees ?

## FORMULATION OF POLICIES AND RULES FOR THE SAFETY OF PASSENGERS IN BUSES

**Dr. Umashree (Nominated) -**

171 (1691) Will the Minister for Transport and Muzrai be pleased to state :-

(a) whether it has come to the notice of the Government that in recent days the fire accidents cases are being increased in sleeper coach buses in the State ; if so, the step taken by the Government for the safety of passengers ;

(b) whether the Government has noticed that the fire accidents are being increased in view of the increasing transportation of goods (parcels) along with passengers in both Government and private sleeper and luxury buses ;

(c) if so, whether an appropriate policy and rules have been formulated for the same ; and the details of punishment that would be imposed against the persons who have violated these rules ?

## MAKING KARNATAKA INTO THE SLUM FREE STATE

**Dr. K. Govindaraj (Elected by Legislative Assembly) -**

172 (1626) Will the Minister for Housing, Wakf and Minority Welfare be pleased to state :-

(a) the number of slum areas in the State ; the population who are residing in these slum areas ; (districtwise details be furnished)

(b) 51 years have been elapsed by constituting the “Slum Development Board” for the development of slum areas,

the number of slums that have been made into slum free so far ; the number of slums not yet to be developed ; whether the intension of establishment of the " Slum Development Board" has been fulfilled ; (details be furnished)

(c) the target that has been fixed regarding the number of houses that would constructed for the people who are living in the slum areas under the various housing schemes of the Central and State Governments ; the number of houses that have been completed and title deeds have been issued ;

(d) the amount of that has been spent for the development of slum areas during the last 5 years ; whether the Government will take steps for making Karnataka into the slum free State ?

**HOUSING SCHEMES IN KALABURAGI DISTRICT**

**Sri. Thippanappa Kamaknoor (Elected by Legislative Assembly) -**

173 (1645) Will the Minister for Housing, Wakf and Minority Welfare be pleased to state :-

(a) the number of houseless families in Kalaburagi district at present ; out of which, the step taken by the Government to provide the housing facility to various families ; (talukwise information be furnished)

(b) the number of houseless beneficiaries for whom the houses have been allotted under various housing schemes in Kalaburagi district during the last 3 years ; (schemewise/yearwise details be furnished)

(c) the special measures taken by the Government to convert the huts in the district into inhabitable houses and make the district hut free ;

(d) whether the proposal is before the Government to increase the subsidy that is being provided under housing schemes in such backward districts like Kalaburgi due to the increase in the price of building materials ; if not, the alternative measures that would be taken by the Government ?

## POSSESSION OF LAND AND DISTRIBUTION OF SAGUVALI CHIT

**Sri. F.H. Jakkappanavar (Nominated) -**

174 (1623) Will the Minister for Revenue be pleased to state :-

(a) the possession of approximately 4000 acre of agriculture land who currently own its in the sorroundings of durgada kere in Alnavar taluk of Dharwad district ; (survey numberwise and extentwise complete details be furnished)

(b) whether the said land is subjected to the land ceiling that has been prescribed under the Karnataka Land Reforms Act ; if not, the prevailing legal reasons for the huge extent of land in the name of one person or one association ; whether any special exemption has been provided by the Government thereof ;

(c) whether it has come the notice of the Government that the Government officers or their family members are cultivating in this land and they have obtained saguvali chit illegally ;

(d) if it is proved that the officers have got saguvali chit illegally by misusing their power, the disciplinary actions that have been taken or to be taken by the Government against such officers and the staff who have co-operated for this irregularity ?

## SCHEME TO PROVIDE THE SUBSIDY FOR THE VAISHNODEVI PILIGRIMAGE

**Sri. C.N. Manje Gowda (Local Authorities Constituency) -**

175 (1649) Will the Minister for Transport and Muzrai be pleased to state :-

(a) whether it has come to the notice of the Government that the Muzrai Department of the State has contemplated to provide the subsidy for the vaishnodevi piligrimage of Jammu and Kashmir on par with Kashi yatra ;

(b) if so, the amount of subsidy that has been intended to provide to every individual for this piligrimage and the particulars of guidelines that have been chalkedout by the department for this scheme ;

(c) the amount of subsidy that is being provided already for the Kashi, Chardham and Manasa Sarovar piligrimages ; the number of beneficiaries who have been benefited under this scheme during the last year (in 2025) ;

(d) the steps taken by the Government with regard to providing concession price of ticket and special facilities to vaishnodevi pilgrims with the collaboration of Railway department ;

(e) the date on which the Government has decided to implement this scheme and the amount of the grant that estimated has been earmarked for the same ?

## HOUSES FOR FISHERMEN

**Sri. Kishor Kumar Puttur (Local Authorities Constituency) -**

176 (1699) Will the Minister for Fisheries and Ports and Inland Water Transport.be pleased to state :-

(a) the total number of houses that have been sanctioned for the persons who are engaged in the fishing profession

in the State during the last 3 years; the details of the number of selected beneficiaries ; (districtwise information be furnished)

(b) the prevailing eligibility for a beneficiary to sanction the said house ;

(c) whether there is necessity to the beneficiary for making the land conversion and obtain the sketch approval and Khata certificate for the site before constructing the said house ; whether the exemption has been provided from the said process ; (if so, the copy of the Government order be furnished)

(d) whether it is mandatory for the beneficiary to get the building licence to construct the sanctioned houses ; if so, the particular of authority for issuing the said licence ;

(e) the Gram Panchayatwise details of the pending beneficiaries who are to be issued the building licence and door number for the houses that have been sanctioned to Dakshina Kannada and Udupi districts during the last three years be furnished ; the reason for pending to issue these building licence and door numbers ;

(f) out of the houses that have been distributed after the year 2023-24 and out of the beneficiaries who have completed the foundation, wall and roof of the house, the number of beneficiaries for whom the various stages of remaining grants has to be released ? (districtwise information be furnished)

## INFORMATION OF INCHARGE SECRETARIES IN THE REVENUE DEPARTMENT

**Sri Ramesh Babu (Nominated) -**

177 (1677) Will the Minister for Revenue be pleased to state :-

(a) whether the incharge officers have been appointed by the Revenue Department of the State Government in the jurisdiction of each taluk and Assistant Commissioner and Deputy Commissioner ; if so, the complete details thereof be furnished ;

(b) the number of meetings that have been conducted by the officers who have been appointed as incharge to the Revenue Department of the taluk during the last 3 years ; the details thereof be furnished ;

(c) whether the incharge officers have been appointed by the Government in the jurisdiction of the Assistant Deputy Commissioners for each sub-divisional officers by the Revenue Department ; if so, the details of the same and the meetings that have been conducted by them be furnished ;

(d) whether the State Government has appointed the senior IAS officers as incharge for the Deputy Commissioners to each district by the Revenue Department ; if so, the date on which they have been appointed ; the details of meetings that have been conducted during last three years be furnished ;

(e) the number of divisions that are there in the Revenue Department of the State ; whether divisionwise high level officers have been appointed as incharge officers ; if so, the details of the same and the meetings that have been conducted during the last three years be furnished ?

**ILLEGAL LAND GRABBING IN**
**HEROHALLI OF YASHWANTHPUR**

**Sri. Sunil Vallyapur (Elected by Legislative Assembly) -**

178 (1658) Will the Minister for Revenue be pleased to state :-

(a) whether it has come to the notice of the Government that the sale deed has been created illegally for the Jaminalal Bajaj Seva Trust with regard to Herohalli and Sri gandada kaval village of Yeshwanthpur hobli of Bengaluru urban ; if so, the step taken by the Government in this regard ;

(b) whether the complaints have been lodged on the officers who fabricated the revenue document in a manner that is benefitting to the Jaminalal Bajaj Seva Trust with regard to the said village ; if so, the details of the action that has been taken by the Government against such officers;

(c) whether the complaints have been received in this matter ; if so, the copy of the complaint be furnished ; the steps taken by the Government in this regard ; (the details alongwith documents be furnished)

(d) earlier the extent of 63 acre of land bearing the survey No:52 of Herohalli of Yashwanthpur hobli of Bengaluru urban is a Government pasture land, the stand of the Government regarding fabrication of several documents to grabbing the said land ;

(e) the complainant filed complaint seriously alleging that the said documents like sale deed and registration sale deeds of Jaminalal Bajaj Seva Trust have been illegally created, whether the investigation has been conducted by the Government in this regard ; if not, the reasons for the delay ; (certified copies of sale deed and registration sale deed along with complete information be furnished)

(f) the order copy of LRF writ petition No: 190/1974-75 that has been executed earlier and the concerned original documents thereof regarding to the Herohalli and Sri gandhada Kaval village be furnished ;

(g) the litigation have been occurred between the Government and jamnalal bajaj seva trust during several years in the Hon'ble Courts regarding the said lands, in fact objections and official documents have not been submitted with regard to the possession of the land by the Government and whether it has come to the notice of the Government regarding the compensation has been provided for alleged trust when the land litigations were in the pending stage in the courts ; whether it has come to the notice of the Government that the officers and staff have been colluded in this case ; if so, the stand of the Government in this regard ?

## ADMINISTRATION AND STAFF OF TALUK OFFICES

**Sri K. Abdul Jabbar (Elected by Legislative Assembly) -**

179 (1697) Will the Minister for Revenue be pleased to state :-

(a) the number of posts which are lying vacant in taluk offices and Nadakacheries of the State ; (talukwise/ postwise information be furnished)

(b) the particulars of measures taken by the Government to expect the disposal of applications that have been received in these offices by bringing the improvement of the services ;

(c) the particulars of appropriate measures taken by the Government to prevent the irregularities and menace of brokers in taluk offices ;

(d) the steps taken by the Government to improve the services of the Nadakacheries ;

(e) the steps taken by the Government to prevent the corruption in land transactions ?

## PENDING CASES OF SETTLEMENT OF PHODI

**Sri. Prathap Simha Nayak K. (Elected by Legislative Assembly) -**

180 (1665) Will the Minister for Revenue be pleased to state :-

(a) the number of cases pending for the settlement of phodi in the State is increasing day by day, whether it has come to the notice of the Government that the farmers are roaming to the offices everyday for making the phodi for their lands ;

(b) if so, the total number of cases which are pending currently for the settlement of phodi across the State ; (districtwise separate details be furnished)

(c) the large number of settlement of phodi cases have been pending for a long time in Dakshina Kannada districts also the reasons for not taking any appropriate and necessary steps by the Government to dispose the same rapidly in the district so far ;

(d) the applications with regard to the said cases have been remaining pending for a long time, the timelimit within which all the pending cases in the district would be completely disposed off ?

**K.R. MAHALAKSHMI**
Secretary
Karnataka Legislative Council

Government Press, Vikasa Soudha Unit, - P2